


### ಅಪೂರ್ವ ಮಾಹಿತಿ

ಗುಡ್ ಬೈ 2011, ತಲ್ಲಣ, ಸುದ್ದಿಯಾದವರು– ಮುಖಪುಟ ಲೇಖನಗಳು ಅಪೂರ್ವ ಮಾಹಿತಿ ಹೊಂದಿದ್ದವು, ಮುದ ನೀಡಿದವು.

– ಸಂತೇಬೆನ್ನೂರು ಫೈಜ್ನಟ್ರಾಜ್, ಪದ್ಮಾ ಜಾಗಟಗೇರಿ, ಕೊಟ್ಟೂರು/ ಸು.ವಿಜಯಲಕ್ಷ್ಮಿ ಶಿವಮೊಗ್ಗ/ ಅಮೃತೇಶ್ವರ ತಂಡರ, ಅಣ್ಣಿಗೇರಿ

### ಸೂಕ್ತವಾದ ಚಿತ್ರಗಳು

'ಸುದ್ದಿಯಾದವರು' ಬರಹಕ್ಕೆ ಸೂಕ್ತವಾಗುವಂತೆ, ನೋಡುತ್ತಲೇ ಇರಬೇಕೆನ್ನುವ ಚಿತ್ರಗಳನ್ನು ರಚಿಸಿದ ಕಲಾವಿದರಿಗೆ ನಮೋ ನಮಃ.

–ಕೆ.ಸಿ. ಸತ್ಯನಾರಾಯಣ, ಬೆಂಗಳೂರು

(ಚಿತ್ರಗಳನ್ನು ರಚಿಸಿದವರು ಭಾವು ಪತ್ತಾರ್) –ಸಂ.

### ಛಲೇ ಹೀಗೇಕೆ?

ವಚನಗಳನ್ನು ಏಕೆ ಹಾಡಲಿಲ್ಲ ಎಂಬ ಪ್ರಶ್ನೆಗೆ, 'ನಾನು ಹಾಡಬಾರದು ಎಂದೇ ಬಿಟ್ಟಿದ್ದೇನೆ' ಎಂಬ ಭೀಮಸೇನ ಜೋಶಿಯವರ ಮಾತು ಉದ್ಧಟತನದ್ದು ಎನಿಸಿತು. ಬಾಹ್ಯ ಪ್ರಪಂಚದಲ್ಲಿ ಎಷ್ಟು ಎತ್ತರಕ್ಕೇರಿದರೂ, ಒಳ ಮನಸ್ಸು ಹೀಗೇಕೆ?

–ಶೋಭಾ ಅರವಿಂದ್, ಶಿವಮೊಗ್ಗ

### 'ಸುಧಾ' ಎಂದರೆ ಸದಾ ರಂಜನೆ!

'ಸುಧಾ' ಈಗಲೂ ಮನೋರಂಜನೆ ಹಾಗೂ ಮನೋವಿಕಾಸಗಳನ್ನು ನೀಡುವುದರಲ್ಲಿ ಮುಂದಿದ್ದಾಳೆ. ಓದುಗರ ಸಂಖ್ಯೆಯಲ್ಲಿ ಮೊದಲ ಸ್ಥಾನ ಬಿಟ್ಟುಕೊಟ್ಟಿಲ್ಲ. ಎಲ್ಲ ವಯಸ್ಸಿನ ಓದುಗರಿಗೂ ಸೂಕ್ತ ಪುಟಗಳನ್ನು ತನ್ನಲ್ಲಿಟ್ಟುಕೊಂಡಿರುತ್ತಾಳೆ. ಕೆಲವೊಮ್ಮೆ ಜಾಹೀರಾತಿನ ಪುಟಗಳು ಜಾಸ್ತಿ ಎನಿಸಿದರೂ, ಅದಿಲ್ಲದ ಪತ್ರಿಕೆ ಇಲ್ಲವಲ್ಲ ಎಂದು ಸಮಾಧಾನ ಮಾಡಿಕೊಳ್ಳಬೇಕಿದೆ.

'ಸುಧಾ' ಚಿನ್ನದ ಹಬ್ಬವನ್ನು ಆಚರಿಸಿಕೊಳ್ಳುವುದನ್ನು ನೋಡಲು ನನ್ನಂತಹ ಅನೇಕರು ಉತ್ಸುಕರಾಗಿದ್ದಾರೆ!

–ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

### ಮನನೀಯ ವಿಚಾರ ಲಹರಿ

ಮಾನವ ವಿವೇಚನಾ ರಹಿತನಾದಾಗ ಏನೆಲ್ಲ ಅನಾಹುತಗಳು ಸಂಭವಿಸುತ್ತವೆ ಎಂಬುದನ್ನು ರಾಮಾಯಣದ ಹಿನ್ನೆಲೆಯಲ್ಲಿ ಚಿತ್ರಿಸಿರುವ ವೈನತೇಯರ 'ವಿಚಾರ ಲಹರಿ' ಮನನೀಯವಾಗಿದೆ.

–ಅ.ನ. ರಾವ್, ಶ್ರೀನಾಥ ಕೊನೇಟಿ, ಬೆಂಗಳೂರು/ ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

### ಎಲ್ಲ ಕುಟುಂಬದ ಕಥೆ

'ಕಯಾದು' ಎಂ.ಎಸ್. ವೇದಾ ಕಥೆ ಪುರಾಣದ ಪಾತ್ರವೊಂದನ್ನು ಪ್ರಸ್ತುತಕ್ಕೆ ಅಳವಡಿಸಿ ಕಥೆಯಾಗಿಸಿರುವುದು ಚೆನ್ನಾಗಿದೆ. ಇವತ್ತಿನ ಪ್ರತಿ ಗೃಹಿಣಿಯೂ 'ಕಯಾದು'ಗಳಾಗಿರುವುದು ಕಹಿ ಸತ್ಯ. ಇದು ಒಂದು ಕುಟುಂಬದ ಕಥೆಯಲ್ಲ, ಬಹುತೇಕ ಎಲ್ಲ ಕುಟುಂಬಗಳ ಕಥೆ.

–ಕಟಾ ವೀರನಹಳ್ಳಿ, ನಾಗರಾಜ, ಶಿರಾ/ ಡಿ.ಗುರುಮಲ್ಲಪ್ಪ, ದೊಡ್ಡಪುರ/ ರೇಣುಕಾ ಪಾಟೀಲ, ದಾವಣಗೆರೆ

### ದಂಗಾಗಿ ಹೋದೆ

ವಂಡರ್‌ಪುಟದಲ್ಲಿ ಭಾರಿ ಬಿಲ್ಗಾರ್ತಿಯನ್ನು ನೋಡಿ ದಂಗಾಗಿ ಹೋದೆ.

ಬಿ.ಎಸ್.ಮುಳ್ಳೂರ, ಹಲಗತ್ತಿ

### ಸೃಷ್ಟಿಯ ಸೊಬಗಿಗೆ ಕೊನೆ ಎಲ್ಲಿ

ಪದ್ಮಜಾ ಸುಂದರೇಶ್ ಬರೆದ 'ಕಳ್ಳಿ ಎಂಬ ಮಳ್ಳಿ!' ಓದಿದೆ. ಅಬ್ಬಾ ಈ ಸೃಷ್ಟಿಯ ಸೊಬಗಿಗೆ ಕೊನೆ ಎಂದು?

–ಕೆ.ವಿ. ಶಿವಕುಮಾರ್, ಸಿ.ಎಸ್. ಅನುಪಮಾ, ಕಾಳೀಹುಂಡಿ

### 'ಸುಧಾ' ಫಲಶ್ರುತಿ

ಗುಲ್ಬರ್ಗ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಕೊಂಚಾವರಂ ಅರಣ್ಯವನ್ನು ವನ್ಯಧಾಮ ಎಂದು ಸರ್ಕಾರ ಇದೀಗ ಘೋಷಿಸಿದೆ. ಕೆಲವು ವಾರಗಳ ಹಿಂದೆ ಈ ಕುರಿತು 'ಸುಧಾ'ದಲ್ಲಿ ಪ್ರಕಟವಾದ ಲೇಖನ ಈ ಬಗ್ಗೆ ಗಮನ ಸೆಳೆದಿತ್ತು. ಇದು 'ಸುಧಾ' ಫಲಶ್ರುತಿ.

–ಎಂ.ಮಲ್ಲಯ್ಯ ಶ್ರೀರಾಂಪುರ, ಚಿತ್ರದುರ್ಗ


